KACM300009112022

Presented on : 21-10-2022
Registered on : 21-10-2022
Decided on : 12-09-2024
Duration : 1 years, 10 months, 22 days

# ಪ್ರಥಮ ದರ್ಜೆ ನ್ಯಾಯಿಕಾ ದಂಡಾಧಿಕಾರಿಯವರ ನ್ಯಾಯಾಲಯ ಃ ಕೊಪ್ಪ

**ಉಪಸ್ಥಿತರುಃ ಶ್ರೀಮತಿ ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ,**

**ಬಿ.ಕಾಂ;ಎಲ್.ಎಲ್.ಎಂ,**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃಕೊಪ್ಪ.**

**ದಿನಾಂಕ 12 ನೇ ಸೆಪ್ಟೆಂಬರ್ ಮಾಹೆ 2024**

**ಸಿ.ಸಿ. ನಂಃ 752/2022**

ಫಿರ್ಯಾದಿ : ಸರ್ಕಾರದ ಪರವಾಗಿ ಕೊಪ್ಪ ಪೊಲೀಸ್ ಠಾಣೆ,
(ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

| | | |
|---|---|---|
| ಆರೋಪಿತರು | 1 | ನಾಗರಾಜ ಟಿ.ಎಂ. ಬಿನ್ ಮಂಜುನಾಥ 33 ವರ್ಷ, ಕೂಲಿ ಕೆಲಸ ವಾಸ ಗಬ್ಬಾನೆ, ಕಾಚಗಲ್, ಸೋಮ್ಲಾಪುರ ಗ್ರಾಮ, ಕೊಪ್ಪ ತಾಲ್ಲೂಕು. |
| | 2 | ಅಪೂರ್ವ ಶೆಟ್ಟಿ ಬಿನ್ ಮಂಜುನಾಥ ಶೆಟ್ಟಿ, 29 ವರ್ಷ, ವಾಸ ಕುಂಬ್ರಿ ಹುಬ್ಬು, ಕಾಚಗಲ್ ರಸ್ತೆ, ಸೋಮ್ಲಾಪುರ ಗ್ರಾಮ, ಕೊಪ್ಪ ತಾಲ್ಲೂಕು. |
| | 3 | ಸಂತೋಷ ಡಿ.ಸಿ. ಬಿನ್ ಚನ್ನಪ್ಪಗೌಡ, 29 ವರ್ಷ, ವ್ಯಾಪಾರ, ವಾಸ ತಲಮಕ್ಕಿ ಗ್ರಾಮ, ಕೊಪ್ಪ ತಾಲ್ಲೂಕು. |
| | 4 | ಸಂಪತ್ ಡಿ.ಸಿ. ಬಿನ್ ಚನ್ನಪ್ಪಗೌಡ, 30 ವರ್ಷ, ವ್ಯಾಪಾರ, ವಾಸ ತಲಮಕ್ಕಿ ಗ್ರಾಮ, ಕೊಪ್ಪ ತಾಲ್ಲೂಕು. |
| | 5 | ಅಭಿಜಿತ್ ಯಾನೆ ಅಭಿ, ಬಿನ್ ಕುಮಾರ ಡಿ.ಎಸ್, 29 ವರ್ಷ, ಮೊಬೈಲ್ ಅಂಗಡಿ ಕೆಲಸ, ವಾಸ ಸಣ್ಣಕೆರೆ, ಹರಂದೂರು ಗ್ರಾಮ, ಕೊಪ್ಪ ತಾಲ್ಲೂಕು. |
| | | **(ಆರೋಪಿತರ ಪರವಾಗಿ ಶ್ರೀ ಎಂ.ಎನ್.ಎಸ್., ವಕೀಲರು)** |

Visit **ecourts.gov.in** for updates or download mobile app "**eCourts Services**" from Android or iOS

| | | |
|---|---|---|
| 1 | ಪ್ರಕರಣದ ದಿನಾಂಕ | 24.06.2022 |
| 2 | ಪ್ರಕರಣದ ವರದಿಯ ದಿನಾಂಕ | 24.06.2022 |
| 3 | ಫಿರ್ಯಾದಿಯ ಹೆಸರು | ಶ್ರೀ ಸುನಿಲ್ |
| 4 | ಸಾಕ್ಷ್ಯ ದಾಖಲೆ ಪ್ರಾರಂಭವಾದ ದಿನಾಂಕ | 11.09.2024 |
| 5 | ಸಾಕ್ಷ್ಯ ದಾಖಲೆ ಮುಕ್ತಾಯವಾದ ದಿನಾಂಕ | 11.09.2024 |
| 6 | ದೂರು ನೀಡಿರುವ ಅಪರಾಧ | ಭಾ.ದಂ.ಸಂ. ಕಲಂ 143, 144, 147, 148, 323, 324, 504, 506 ಸಹವಾಚಕ ಕಲಂ 149. |
| 7 | ನ್ಯಾಯಾಧೀಶರ ಅಭಿಪ್ರಾಯ | ಭಾ.ದಂ.ಸಂ. ಕಲಂ 143, 144, 147, 148, 323, 324, 504, 506 ಸಹವಾಚಕ ಕಲಂ 149 ರ ರೀತ್ಯಾ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಷಿ ಎಂದು ಆದೇಶಿಸಲಾಗಿದೆ. |
| 8 | ಫಿರ್ಯಾದಿಯ ಪರವಾಗಿ | ಸ.ಸ.ಅ. |
| 9 | ಆರೋಪಿ/ತರ ಪರವಾಗಿ | **(ಶ್ರೀ ಎಂ.ಎನ್.ಎಸ್., ವಕೀಲರು)** |

**ತೀ ರ್ಪು**

ಪೊಲೀಸ್ ಉಪ ನಿರೀಕ್ಷಕರು, ಕೊಪ್ಪ ಪೊಲೀಸ್ ಠಾಣೆ, ಇವರು 1 ರಿಂದ 5 ನೇ ಆರೋಪಿತರು ಭಾ.ದಂ.ಸಂ. ಕಲಂ 143, 144, 147, 148, 323, 324, 504, 506 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಗತಿಗಳು ಸಂಕ್ಷಿಪ್ತವಾಗಿ ಕೆಳಕಂಡಂತೆ ಇರುತ್ತದೆ.**

Visit **ecourts.gov.in** for updates or download mobile app "**eCourts Services**" from Android or iOS

ದಿನಾಂಕ 24.06.2022 ರಂದು ಸಂಜೆ 5.00 ಗಂಟೆಗೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಯ ಸೋಮ್ಲಾಪುರ ಗ್ರಾಮದ ಕಾಚಗಲ್ ನಾಗರಾಜ್ ರವರ ಅಂಗಡಿಯ ಹತ್ತಿರದ ಗಬ್ಬಾನೆ ರಸ್ತೆ ಸರ್ಕಲ್ ನಲ್ಲಿ ಚಾಸಾ-1 ಸುನಿಲ್ ಪೂಜಾರಿ, ಚಾಸಾ-2 ಅನಿಲ್ ಮತ್ತು ಚಾಸಾ-3 ರಾಮ ರವರು ಇರುವಾಗ ಆರೋಪಿತರು ಅಕ್ರಮಕೂಟ ಕಟ್ಟಿಕೊಂಡು 4 ನೇ ಆರೋಪಿತನ ಬಾಬ್ತು ಕಾರು ಸಂ. ಕೆಎ-03/ಹೆಚ್ -9431 ರಲ್ಲಿ ಬಂದು 4 ನೇ ಆರೋಪಿತನು ಚಾಸಾ-2 ರವರ ಕಪಾಳಕ್ಕೆ ಕೈಯಿಂದ ಹೊಡೆದು ನೋವುಂಟು ಮಾಡಿದ್ದು, ಚಾಸಾ.1 ಮತ್ತು 3 ರವರು ಜಗಳ ಬಿಡಿಸಲು ಹೋದಾಗ 2 ನೇ ಆರೋಪಿತನು ಕೈಯಿಂದ ಚಾಸಾ-1 ರವರಿಗೆ ಬೆನ್ನಿಗೆ ಹಾಗೂ ಕುತ್ತಿಗೆಯ ಭಾಗಕ್ಕೆ, 4 ನೇ ಆರೋಪಿತನು ಕೈಯಿಂದ ಚಾಸಾ-3 ರವರ ತಲೆಗೆ ಹಾಗೂ ಬೆನ್ನಿಗೆ, 5 ನೇ ಆರೋಪಿತನು ಕೈಯಿಂದ ಚಾಸಾ-5 ರವರಿಗೆ ಕಪಾಳಕ್ಕೆ ಮತ್ತು ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಚಾಸಾ.4 ಮತ್ತು 5 ರವರು ಜಗಳ ಬಿಡಿಸಲು ಬಂದಾಗ 3 ನೇ ಆರೋಪಿತನು ಗಾಜಿನ ಬಾಟಲಿಯಿಂದ ಚಾಸಾ-4 ರವರ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಹಾಗೂ ಆರೋಪಿತರು ಚಾಸಾ-1 ರಿಂದ 5 ರವರಿಗೆ ಬೋಳಿಮಕ್ಕಳ ಸೂಳೆಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿದ್ದಾಗಿರುತ್ತದೆ. ಈ ಬಗ್ಗೆ ಚಾಸಾ.1 ರವರ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಕೈಗೊಂಡು ಆರೋಪಿತರು ಮೇಲ್ಕಂಡ ಕಲಂ ರೀತ್ಯಾ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಾರೆ ಎಂದು ಆರೋಪಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಲಾಗಿದೆ.

3. ಆರೋಪಿತರು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ. ಆರೋಪಿತರಿಗೆ ದಂಡ ಪ್ರಕ್ರಿಯೆ ಸಂಹಿತೆ ಕಲಂ 207 ರಡಿಯಲ್ಲಿ ದೋಷಾರೋಪಣ ಪತ್ರದ ನಕಲನ್ನು ಒದಗಿಸಲಾಯಿತು**.** ತದನಂತರ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ವಿವರಿಸಲಾಗಿ, ಆರೋಪಿತರು ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು ಎಂದು ಉತ್ತರಿಸಿರುತ್ತಾರೆ**.**

Visit **ecourts.gov.in** for updates or download mobile app "**eCourts Services**" from Android or iOS

4. ಅಭಿಯೋಜನೆಯವರು ಆರೋಪಿತರ ವಿರುದ್ದ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಒಬ್ಬರು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು 5 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ1 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿದ್ದು ಸಹಾಯಕ ಸರ್ಕಾರಿ ಅಭಿಯೋಜಕರು ದೋಷರೋಪಣೆ ಪಟ್ಟಿಯಲ್ಲಿ ತೋರಿಸಿದ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡುವಂತೆ ಕೋರಿದ್ದು, ಆದರೆ ಪ್ರಾಸಾ 1 ರವರು ದೂರುದಾರರು ಆಗಿದ್ದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾದ ಕಾರಣ ದೋಷರೋಪಣೆ ಪಟ್ಟಿಯಲ್ಲಿ ತೋರಿಸಿದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡುವುದರಿಂದ ಅಭಿಯೋಜನೆ ಪ್ರಕರಣಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಮನಗೊಂಡು ಉಳಿದ ಸಾಕ್ಷಿದಾರರ ವಿಚಾರಣೆಯನ್ನು ವಿಚಾರಣ ಹಂತದಿಂದ ಕೈ ಬಿಟ್ಟು ಅಭಿಯೋಜನೆ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಆರೋಪಿ ವಿರುದ್ದ ಆರೋಪಣೆಯನ್ನು ರುಜುವಾತುಪಡಿಸುವಂತಹ ಯಾವುದೇ ಮೌಖಿಕ ಸಾಕ್ಷಧಾರಗಳು ಈ ಪುರಕಣದಲ್ಲಿ ಕಂಡುಬಾರದ ಕಾರಣ ದಂ.ಪ್ರ. ಸಂ.ಕಲಂ.313 ರಡಿಯಲ್ಲಿ ಆರೋಪಿತರ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಯಿತು**.** ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ **437** ಎ ರಡಿಯಲ್ಲಿ ಜಾಮೀನು ಒದಗಿಸಿರುತ್ತಾರೆ**.**

5. ಉಭಯ ಪಕ್ಷಗಾರರ ಪರ ವಾದ-ವಿವಾದ ಕೇಳಿದ್ದೇನೆ. ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತದೆ.

**ಅಂಶಗಳು**

1. ದಿನಾಂಕ 24.06.2022 ರಂದು ಸಂಜೆ 5.00 ಗಂಟೆಗೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಯ ಸೋಮ್ಲಾಪುರ ಗ್ರಾಮದ ಗಬ್ಬಾನೆ ರಸ್ತೆ ಸರ್ಕಲ್ ನಲ್ಲಿ ಚಾಸಾ-1 ಸುನಿಲ್ ಪೂಜಾರಿ, ಚಾಸಾ-2 ಅನಿಲ್ ಮತ್ತು ಚಾಸಾ-3 ರಾಮ ರವರು ಇರುವಾಗ ಆರೋಪಿತರು ಏಕೋದ್ದೇಶದಿಂದ

ಅಕ್ರಮಕೂಟ ಕಟ್ಟಿಕೊಂಡು 4 ನೇ ಆರೋಪಿತನ ಬಾಬ್ತು ಕಾರು ಸಂ. ಕೆಎ-03/ಹೆಚ್ -9431 ರಲ್ಲಿ ಬಂದು 4 ನೇ ಆರೋಪಿತನು ಚಾಸಾ-2 ರವರ ಕಪಾಳಕ್ಕೆ ಕೈಯಿಂದ ಹೊಡೆದು ಭಾ.ದಂ.ಸಂ.ಕಲಂ **143 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ?

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು ಮಾರಕಾಯುಧವಾದ ಗಾಜಿನ ಬಾಟಲಿಯನ್ನು ಹಿಡಿದುಕೊಂಡು, ಭಾ.ದಂ.ಸಂ.ಕಲಂ **144 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ?

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು ಚಾಸಾ-1 ರಿಂದ 3 ರವರೊಂದಿಗೆ ಬಲವನ್ನು ಪ್ರದರ್ಶಿಸಿ ದೊಂಬಿ ಮಾಡಿ ಭಾ.ದಂ. ಸಂ. ಕಲಂ **147 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ?

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು ಮಾರಕಾಸ್ತ್ರವಾದ ಗಾಜಿನ ಬಾಟಲಿಯನ್ನು ಹೊಂದಿ ಏಕೋದ್ದೇಶ ಸಾಧನೆಗಾಗಿ ಅಕ್ರಮಕೂಟದ ಸದಸ್ಯರಾಗಿದ್ದುಕೊಂಡು ದೊಂಬಿ ಮಾಡಿ ಭಾ.ದಂ. ಸಂ. ಕಲಂ **148 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ?

5. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು 4 ನೇ ಆರೋಪಿತನು ಕೈಯಿಂದ ಚಾಸಾ-2 ರವರ ಕಪಾಳಕ್ಕೆ, 2 ನೇ ಆರೋಪಿತನು ಕೈಯಿಂದ ಚಾಸಾ.1 ರವರಿಗೆ ಬೆನ್ನಿಗೆ ಹಾಗೂ ಕುತ್ತಿಗೆಯ ಭಾಗಕ್ಕೆ, 4 ನೇ ಆರೋಪಿತನು ಕೈಯಿಂದ ಚಾಸಾ-3 ರವರ ತಲೆಗೆ ಹಾಗೂ ಬೆನ್ನಿಗೆ, 5 ನೇ ಆರೋಪಿತನು ಕೈಯಿಂದ

ಚಾಸಾ.5 ರವರಿಗೆ ಕಪಾಳಕ್ಕೆ ಮತ್ತು ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಭಾ.ದಂ. ಸಂ. ಕಲಂ **323 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ ?

6. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು 3 ನೇ ಆರೋಪಿತನು ಗಾಜಿನ ಬಾಟಲಿಯಿಂದ ಚಾಸಾ-4 ರವರ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ **ಭಾ. ದಂ. ಸಂ. ಕಲಂ 324 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ?

7. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು ಚಾಸಾ-1 ರಿಂದ 5 ರವರಿಗೆ ಬೋಳಿಮಕ್ಕಳ ಸೂಳೆಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿ **ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ

8. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶದಿಂದ ಆಕ್ರಮಕೂಟ ಕಟ್ಟಿಕೊಂಡು ಚಾಸಾ-1 ರಿಂದ 5 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿ **ಭಾ. ದಂ.ಸಂ.ಕಲಂ 506 ಸಹವಾಚಕ ಕಲಂ 149** ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯತೀತವಾಗಿ ರುಜುವಾತು ಪಡಿಸುವರೇ?

9. ಯಾವ ಆದೇಶ?

6. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಡಂತೆ ಈ ನ್ಯಾಯಾಲಯವು ಉತ್ತರಿಸುತ್ತದೆ.

| | | |
|---|---|---|
| ಅಂಶ-1 | ಃ | ನಕರಾತ್ಮಕವಾಗಿ |
| ಅಂಶ-2 | ಃ | ನಕರಾತ್ಮಕವಾಗಿ |
| ಅಂಶ-3 | ಃ | ನಕರಾತ್ಮಕವಾಗಿ |
| ಅಂಶ-4 | ಃ | ನಕರಾತ್ಮಕವಾಗಿ |
| ಅಂಶ-5 | ಃ | ನಕರಾತ್ಮಕವಾಗಿ |
| ಅಂಶ-6 | ಃ | ನಕರಾತ್ಮಕವಾಗಿ |
| ಅಂಶ-7 | ಃ | ನಕರಾತ್ಮಕವಾಗಿ |
| ಅಂಶ-8 | ಃ | ನಕರಾತ್ಮಕವಾಗಿ |
| ಅಂಶ-9 | ಃ | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಃ |

**ಕಾರಣಗಳು**

7. **ಅಂಶ-1 ರಿಂದ 8 ಃ-**

ಈ ಮೇಲ್ಕಂಡ ಅಂಶಗಳು ಪರಸ್ಪರ ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚಿಸಲು ತೆಗೆದುಕೊಳ್ಳಲಾಗಿರುತ್ತದೆ. ಈ ಪ್ರಕರಣದ ಫಿರ್ಯಾದಿದಾರರಾದ ಶ್ರೀ ಸುನಿಲ್ ರವರನ್ನು ಅಭಿಯೋಜನೆಯವರು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ತನಗೆ ಪರಿಚಯ ಇರುತ್ತಾರೆ, ಅವರು ತನ್ನ ಸ್ನೇಹಿತರು, ಆರೋಪಿಗಳು ಹಾಗೂ ತಮ್ಮ ನಡುವೆ ಬಾಯಿ ಮಾತಿನ ಚಕಮಕಿಯಾಗಿದ್ದು, ಬೇರೆ ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

8. ಪ್ರಾಸಾ.1 ರವರು ತಾನು ನೀಡಿರುವ ದೂರನ್ನು ನಿಪಿ.1 ಹಾಗೂ ತನ್ನ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿ ನಿಪಿ.1 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ.1 ರವರು ಸ್ಥಳಮಹಜರನ್ನು ನಿಪಿ.2 ಹಾಗೂ ತನ್ನ ಸಹಿಯನ್ನು ನಿಪಿ2(ಎ) ಎಂದು ಗುರುತಿಸಿ ತಾನು ಪೊಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ, ನಿಪಿ.2 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ, ನಿಪಿ.2 ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ.1 ರವರು ನಿಪಿ.3 ಮತ್ತು 4 ಭಾವಚಿತ್ರಗಳಲ್ಲಿ ತನ್ನನ್ನು ಗುರುತಿಸಿ ಸದರಿ ಭಾವಚಿತ್ರಗಳನ್ನು ಯಾವ ವಿಚಾರಕ್ಕಾಗಿ ಹಾಗೂ ಎಲ್ಲಿ ತೆಗೆದುಕೊಂಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ ಹಾಗೂ ನ್ಯಾಯಾಲಯದ ಮುಂದೆ ಇರುವ ವಸ್ತು ಈ ತಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ.

9. ಈ ಸಾಕ್ಷಿದಾರರನ್ನು ಸರ್ಕಾರಿ ಸಹಾಯಕ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ 24.06.2022 ರಂದು ಸಂಜೆ 5.00 ಗಂಟೆಗೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಯ ಸೋಮ್ಲಾಪುರ ಗ್ರಾಮದ ಗಬ್ಬಾನೆ ರಸ್ತೆಯಲ್ಲಿ ಚಾಸಾ-2 ಮತ್ತು ಚಾಸಾ-3 ರವರು ಇರುವಾಗ ಆರೋಪಿತರು ಅಕ್ರಮವಾಗಿ ಗುಂಪು ಕಟ್ಟಿಕೊಂಡು 4 ನೇ ಆರೋಪಿತನ ಬಾಬ್ತು ಕಾರು ಸಂ. ಕೆಎ-03/ಹೆಚ್ -9431 ರಲ್ಲಿ ಬಂದು 4 ನೇ ಆರೋಪಿತನು ಚಾಸಾ-2 ರವರ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾರೆ, ಆರೋಪಿಗಳು ಆ ಸಮಯದಲ್ಲಿ ಅಕ್ರಮವಾಗಿ ಗುಂಪುನ್ನು ಕಟ್ಟಿಕೊಂಡು ಗಾಜಿನ ಬಾಟಲಿಯನ್ನು ಹಿಡಿದುಕೊಂಡು ಬಂದು ದೊಂಬಿಯನ್ನು ಉಂಟು ಮಾಡಿರುತ್ತಾರೆ, ನಂತರ 2 ನೇ ಆರೋಪಿತನು ಕೈಯಿಂದ ತನ್ನ ಬೆನ್ನಿಗೆ ಹಾಗೂ ಕುತ್ತಿಗೆಯ ಭಾಗಕ್ಕೆ, 4 ನೇ ಆರೋಪಿತನು ಕೈಯಿಂದ ಚಾಸಾ-3 ರವರ ತಲೆಗೆ ಹಾಗೂ ಬೆನ್ನಿಗೆ, 5 ನೇ ಆರೋಪಿತನು ಕೈಯಿಂದ ಚಾಸಾ-5 ರವರಿಗೆ

Visit **ecourts.gov.in** for updates or download mobile app "**eCourts Services**" from Android or iOS

ಕಪಾಳಕ್ಕೆ ಮತ್ತು ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಎಂದು ಒಪ್ಪಿಕೊಂಡಿರುವುದಿಲ್ಲ.

10. ಪ್ರಾಸಾ.1 ರವರು ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ ಅದೇ ಸಮಯದಲ್ಲಿ 3 ನೇ ಆರೋಪಿತನು ಗಾಜಿನ ಬಾಟಲಿಯಿಂದ ಚಾಸಾ-4 ರವರ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಹಾಗೂ ಆ ಸಮಯದಲ್ಲಿ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಒಪ್ಪಿಕೊಂಡಿರುವುದಿಲ್ಲ. ಮುಂದುವರೆದು ಈ ಬಗ್ಗೆ ತಾನು ನಿಪಿ.1 ರಂತೆ ದೂರನ್ನು ಪೋಲಿಸರ ಮುಂದೆ ನೀಡಿರುತ್ತೇನೆ, ನಿಪಿ.1 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ತಾನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ ಎಂದು ಒಪ್ಪಿಕೊಂಡಿರುವುದಿಲ್ಲ. ದಿ:25.06.2022 ರಂದು ಪೋಲಿಸರು ಘಟನಾಸ್ಥಳಕ್ಕೆ ಬಂದು ತಾನು ಸ್ಥಳ ತೋರಿಸಿದ ಮೇರೆಗೆ ಚಾಸಾ 9 ಮತ್ತು 10 ರವರ ಸಮಕ್ಷಮದಲ್ಲಿ ಘಟನಾಸ್ಥಳವನ್ನು ಪರಿಶೀಲಿಸಿ, ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೂ ಮಹಜರ್ ಕ್ರಮವನ್ನು ನಿಪಿ.2 ರಂತೆ ಜರುಗಿಸಿರುತ್ತಾರೆ, ಆ ಸಮಯದಲ್ಲಿ ಪೊಲೀಸರು ತಮ್ಮ ಸಮಕ್ಷಮದಲ್ಲಿ ಒಂದು ಗಾಜಿನ ಬಾಟಲಿಯನ್ನು ವಶಕ್ಕೆ ಪಡೆದಿರುತ್ತಾರೆ, ನಿಪಿ.2 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ತಾನು ತಿಳಿದುಕೊಂಡಿರುತ್ತೇನೆ ಆ ಸಮಯದಲ್ಲಿ ನಿಪಿ.3 ಮತ್ತು 4 ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಒಪ್ಪಿಕೊಂಡಿರುವುದಿಲ್ಲ. ಮುಂದುವರೆದು ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ನಿರಾಕರಿಸಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲೂ ಸಹ ಅಭಿಯೋಜನೆಗೆ ಪೂರಕವಾದ ಯಾವುದೇ ಅಂಶಗಳನ್ನು ಹೊರತಂದಿರುವುದಿಲ್ಲ.

Visit **ecourts.gov.in** for updates or download mobile app “**eCourts Services**” from Android or iOS

11. ಚಾಸಾ 1/ಪ್ರಾಸಾ 1 ರವರು ಈ ಪ್ರಕರಣದ ಫಿರ್ಯಾದಿದಾರರು ಆಗಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಹೀಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಅಪಾದಿಸಿದಂತಹ ಆರೋಪವನ್ನು ನಿಸ್ಸಂದೇಹವಾಗಿ ಹಾಗೂ ಪೂರಕವಾದ ಸಾಕ್ಷ್ಯಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡು ಬಂದಿರುತ್ತದೆ.

12. ಮೇಲ್ಕಣಿಸಿದ ಸಾಕ್ಷಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ.1 ರವರನ್ನು ವಿಚಾರಣೆಗೆ ಒಳಪಡಿಸಿದ್ದು, ಆದರೆ ಪ್ರಾಸಾ 1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮತ್ತು ದೂರಿನಲ್ಲಿ ಇರುವ ಅಂಶಗಳಿಗೂ ವ್ಯತ್ತಿರೀಕ್ತವಾಗಿ ಸಾಕ್ಷವನ್ನು ನುಡಿದಿರುವುದರಿಂದ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಪ್ರಬಲವಾದ ಹಾಗೂ ನಂಬಲರ್ಹವಾದ ಸಾಕ್ಷ್ಯಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಸದರಿ ಸಂಶಯದ ಲಾಭವನ್ನು ಪಡೆದು ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಈ ನ್ಯಾಯಾಲಯ ಅಭಿಪ್ರಾಯಪಟ್ಟು ಮೇಲ್ಕಣಿಸಿದ ಅಂಶ-1 ರಿಂದ 8 ಗಳನ್ನು ನಕರಾತ್ಮಕವಾಗಿ ಉತ್ತರಿಸಲಾಯಿತು.

13. **<u>ಅಂಶ 9:-</u>**

ಈ ಮೇಲ್ಕಂಡ ಅಂಶದ ಮೇಲಿನ ಚರ್ಚೆಯ ಮೇಲೆ ಬಂದ ನಿರ್ಣಯದಂತೆ ಈ ನ್ಯಾಯಾಲಯವು ಕೆಳಕಂಡ ಆದೇಶವನ್ನು ಮಾಡಿರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

## ಆದೇಶ

ದಂ. ಪ್ರ. ಸಂ. ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 1 ರಿಂದ 5 ನೇ ಆರೋಪಿತರ ವಿರುದ್ಧ ಮಾಡಲಾದ ಭಾ.ದಂ.ಸಂ. ಕಲಂ 143, 144, 147, 148, 323, 324, 504, 506 ಸಹವಾಚಕ ಕಲಂ 149 ರಡಿಯಲ್ಲಿನ ಆರೋಪಗಳಿಂದ ಆರೋಪಿತರನ್ನು ಈ ಮೊಕದ್ದಮೆಯಿಂದ ನ್ಯಾಯಾಲಯವು ದೋಷಮುಕ್ತರನ್ನಾಗಿ ಖುಲಾಷೆಗೊಳಿಸಿರುತ್ತದೆ.

ಪ್ರಕರಣದಲ್ಲಿ ಆರೋಪಿತರು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯೆ ಸಂಹಿತೆ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ದಿನದಿಂದ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತವೆ.

ಸ್ವತ್ತು ಪಟ್ಟಿ ಸಂಖ್ಯೆ 51/2022, ದಿನಾಂಕ 25.06.2022 ರಲ್ಲಿ ನಮೂದಿಸಿರುವ ವಸ್ತು, ನಿಷ್ಪ್ರಯೋಜಕ ವಸ್ತು ಆಗಿರುವುದರಿಂದ ಅದನ್ನು ಆಪೀಲು ಅವಧಿ ಕಳೆದು ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 12 ನೇ ಸೆಪ್ಟೆಂಬರ್ 2024 ರಂದು ನಾನು ಘೋಷಿಸಿದ್ದೇನೆ.)

ಸಹಿ/-

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕೊಪ್ಪ.

Visit **ecourts.gov.in** for updates or download mobile app “**eCourts Services**” from Android or iOS

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ**

ಪ್ರಾಸಾ-1 ಃ ಶ್ರೀ ಸುನಿಲ್ ಕೆ.ಆರ್. 11.09.2024

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ**

- ಇಲ್ಲಾ -

**ಅಭಿಯೋಜನೆ ಪರ ಗುರುತಿಸಿದ ದಾಖಲೆಗಳುಃ**

| | | |
|---|---|---|
| ನಿಪಿ-1 | ಃ | ದೂರು |
| ನಿಪಿ-1(ಎ) | ಃ | ಸಹಿ |
| ನಿಪಿ-2 | ಃ | ಮಹಜರ್ |
| ನಿಪಿ-2(ಎ) | ಃ | ಸಹಿ |
| ನಿಪಿ-3-4 | ಃ | ಫೋಟೋಗಳು |
| ನಿಪಿ-5 | ಃ | ಸಿಡಿ |

**ಆರೋಪಿತರ ಪರ ಗುರುತಿಸಿದ ದಾಖಲೆಗಳುಃ**

ಇಲ್ಲಾ

**ಗುರುತಿಸಲಾದ ಮುದ್ದೆಮಾಲುಗಳುಃ**

ಇಲ್ಲಾ

ಸಹಿ/-

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕೊಪ್ಪ.

AISHWARYA C PATTANSHETTI
Digitally signed by AISHWARYA C PATTANSHETTI
Date: 2024.09.12 15:56:38 +0530

Visit **ecourts.gov.in** for updates or download mobile app “**eCourts Services**” from Android or iOS